ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲಿನ ಬಡ್ಡಿ ಇಳಿಸುವುದು.

154(269) ಶ್ರೀ ಬಿ.ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಹಕಾರ ಸಂಘಗಳ ಮೂಲಕ ರೈತರಿಗೆ ಎಷ್ಟು ಮೊತ್ತದ ಹಣವನ್ನು ನೀಡಲಾಗಿದೆ?

ಆ) ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲಿನ ಬಡ್ಡಿದರವನ್ನು ಇಳಿಸುವ ಉದ್ದೇಶ ಏನಾದರೂ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) 1998-99ನೇ ಸಾಲಿನಲ್ಲಿ ಸಹಕಾರ ಸಂಘಗಳ ಮೂಲಕ ರೈತರಿಗೆ ಒಟ್ಟು ರೂ. 1055 ಕೋಟಿ ಸಾಲವನ್ನು ನೀಡಲಾಗಿದೆ.

ಆ) ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲೆ ವಿಧಿಸುವ ಬಡ್ಡಿ ದರದ ಕ್ರಮವು ನಬಾರ್ಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಚೌಕಟ್ಟಿನೊಳಗೆ ಇರುವುದರಿಂದ, ರೈತರಿಗೆ ಯುಕ್ತ ದರದಲ್ಲಿ ದೊರೆಯುವಂತೆ ಮಾಡುವ ಉದ್ದೇಶ ಸರ್ಕಾರಕ್ಕೆ ಇರುತ್ತದೆ.

ಇ) ರೈತರಿಗೆ ಸಾಲವು ಯುಕ್ತ ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ದೊರೆಯುವಂತಾಗಲೆಂಬ ದಿಸೆಯಲ್ಲಿ 1996 ಮತ್ತು 1997 ರಲ್ಲಿ ಸರ್ಕಾರವು ಸಂಬಂಧಪಟ್ಟ ಪುರಸಭೆಗಳನ್ನು ನಡೆಸಿರುತ್ತದೆ. ಇದೆಲ್ಲದರ ಪರಿಣಾಮವಾಗಿ 1996-97ರಲ್ಲಿ ರೂ. 25,000.00 ಸಾಲದ ವರೆಗೆ ಶೇಕಡಾ 18.5 ರೂ. 25,000.00 ಮೇಲ್ಪಟ್ಟ ಸಾಲಕ್ಕೆ ಶೇಕಡ 16 ಇದ್ದ ಬಡ್ಡಿ ದರವನ್ನು ಇಳಿಸಿ, ಪ್ರಸ್ತುತ ರೂ. 15,000.00 ರವರೆಗೆ ಶೇಕಡಾ 12.5 ರೂ 15,000.00 ರಿಂದ ರೂ. 25,000.00 ರವರೆಗೆ ಶೇಕಡಾ 18.5 ರೂ.25,000.00 ರಿಂದ 50.000.00 ರವರೆಗೂ ಶೇಕಡಾ 14.5 ಬಡ್ಡಿಯ ದರವನ್ನು ವಿಧಿಸುವಂತೆ ಸಲಹೆ ನೀಡಲಾಗಿದೆ. ಬಡ್ಡಿಯ ದರ ವಿಧಿಸುವ ಕ್ರಮವು ನಬಾರ್ಡ್ ಮತ್ತು ಆರ್.ಬಿ.ಐ. ಮಾರ್ಗಸೂಚಿಯ ವ್ಯಾಪ್ತಿಯಲ್ಲಿ ಬರುವುದರಿಂದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಕನಿಷ್ಟ ಶೇಕಡಾ 12 ಬಡ್ಡಿಯ ದರ ವಿಧಿಸುವ ಪರತ್ತಗೆ ಒಳಪಟ್ಟು ಅನಿಯಂತ್ರಣಗೊಳಿಸಿರುವುದರಿಂದ ಸರ್ಕಾರವು ತನ್ನ ಪರಿಮಿತಿಯೊಳಗೆ ಸಹಕಾರ ಸಂಸ್ಥೆಗಳ ಆರ್ಥಿಕ ಸಬಲತೆಯ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮವಿಟ್ಟಿದೆ.